# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : **ಮೇರಿ ಲೂಯಿ ಬರ್ಕ್**                ಸಂಗ್ರಹಾನುವಾದ : **ಸ್ವಾಮಿ ವೀರೇಶಾನಂದ**

**ಭಾಗ ೧೫**

## ಮಧ್ಯಪಾಶ್ಚಾತ್ಯ ಅಮೆರಿಕೆಯ ಪ್ರವಾಸ

ಸರ್ವಧರ್ಮ ಸಮ್ಮೇಳನದ ನಂತರ ಸ್ವಾಮಿ ವಿವೇಕಾನಂದರು ಚಿಕಾಗೋ ನಗರದಲ್ಲಿಯೇ ಉಳಿದುಕೊಂಡಿದ್ದರು. ತದನಂತರ, ನವೆಂಬರ್ ೧೮೯೩ರಲ್ಲಿ, ಅವರು ವಿಸ್‌ಕನ್‌ಸಿನ್ ರಾಜ್ಯದ ರಾಜಧಾನಿಯಾದ ಮ್ಯಾಡಿಸನ್ ನಗರಕ್ಕೆ ಆಗಮಿಸಿದರು. ಇದು ಸ್ವಾಮೀಜಿಯವರ ಮಧ್ಯಪಾಶ್ಚಾತ್ಯ ಮತ್ತು ದಕ್ಷಿಣ ಅಮೆರಿಕೆಯ ಪ್ರವಾಸಕ್ಕೆ ನಾಂದಿಯಾಯಿತು. ಈ ಪ್ರವಾಸ ಏಪ್ರಿಲ್ ೧೮೯೪ರವರೆಗೆ ನಡೆಯಿತು. ಈ ಪ್ರವಾಸವು ಪ್ರಸಿದ್ಧವಾಗಿದೆ ಮತ್ತು ಪ್ರಮುಖವೂ ಆಗಿದೆ. ಆದರೂ ನಮಗೆ ಮಾಹಿತಿ ಇರುವುದು ಕಡಿಮೆ. ಡೆಟ್ರಾಯಿಟ್ ಪಟ್ಟಣಕ್ಕೆ ಸ್ವಾಮೀಜಿ ಫೆಬ್ರವರಿ ೧೮೯೪ ರಲ್ಲಿ ಆಗಮಿಸಿದರು. ಇದಕ್ಕೆ ಮುಂಚಿನ ಮಾಹಿತಿ ಸಿಕ್ಕಿದ್ದು ಕೇವಲ ನಾಲ್ಕು ನಗರಗಳ ಬಗ್ಗೆ ಮಾತ್ರ. ಸ್ವಾಮೀಜಿ ನವೆಂಬರ್ ೧೮೯೩ರಲ್ಲಿ ಮ್ಯಾಡಿಸನ್, ಮಿನ್ನಿಯಾಪೊಲಿಸ್ ಮತ್ತು ಡೆಮೊನಿಸ್ ನಗರಗಳಿಗೆ ಭೇಟಿಕೊಟ್ಟರು. ಆದರೆ ನಮ್ಮ ಸಂಶೋಧನೆಯಿಂದ ಸ್ವಾಮೀಜಿ ಮೆಂಫಿಸ್, ಟೆನ್ನಸ್ಸೀ ನಗರಗಳನ್ನು ಜನವರಿ ೧೮೯೪ರಲ್ಲಿ ಸಂದರ್ಶಿಸಿದರು ಎನ್ನುವುದು ಕೂಡ ತಿಳಿದುಬಂದಿದೆ.

ಏನೇ ಇರಲಿ, ಈ ಸುದೀರ್ಘ ಪ್ರವಾಸದಲ್ಲಿ ಸ್ವಾಮೀಜಿ ಮೊದಲು ತಲುಪಿದ್ದು ಮ್ಯಾಡಿಸನ್ ನಗರ. ಈ ನಗರವು ಚಿಕಾಗೋ ನಗರದಿಂದ ೧೪೦ ಮೈಲು ದೂರದಲ್ಲಿದೆ. ಆ ಕಾಲದಲ್ಲಿ ಇದರ ಜನಸಂಖ್ಯೆ ೧೩,೦೦೦ ಮಾತ್ರ. ಇಲ್ಲಿ ಅವರು ಇದ್ದದ್ದು ಒಂದು ರಾತ್ರಿ ಮಾತ್ರ. ಈ ಬಗ್ಗೆ ಅವರು ಮಿಸಸ್ ಹೇಲ್ ಅವರಿಗೆ ಬರೆದ ತಮ್ಮ ಒಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಮಿಸ್ಟರ್ ಅಪ್‌ಡೈಕ್ ಎಂಬ ಸಭ್ಯ ಗೃಹಸ್ಥನು ರೈಲ್ವೇ ನಿಲ್ದಾಣದಲ್ಲಿ ಅವರನ್ನು ಬರಮಾಡಿಕೊಂಡನು. ಆತನು ಸ್ವಾಮೀಜಿಯವರನ್ನು ಅಲ್ಲಿನ ಪ್ರಸಿದ್ಧ ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡು ಹೋದನು. ಅವರು ಅಲ್ಲಿ ಭಾಷಣ ಮಾಡಿದರು. ಅಲ್ಲಿ ಅವರಿಗೆ ೧೦೦ ಡಾಲರುಗಳ ಸಂಭಾವನೆ ದೊರಕಿತು. ಒಡನೆಯೇ ಅವರು ರಾತ್ರಿಯ ರೈಲನ್ನು ಹಿಡಿದುಕೊಂಡು, ಮಿನ್ನಿಯಾಪೊಲಿಸ್‌ಗೆ ಹೊರಟುಬಿಟ್ಟರು. ಆ ಕಾಲದಲ್ಲಿ ಧಾರ್ಮಿಕ ಪ್ರವಚನಕಾರರಿಗೆ ರೈಲ್ವೇಪ್ರಯಾಣದಲ್ಲಿ ರಿಯಾಯತಿ ಟಿಕೆಟ್ ಅನ್ನು ಕೊಡಲಾಗುತ್ತಿತ್ತು. ಅದಕ್ಕಾಗಿ ಸ್ವಾಮೀಜಿ ಪ್ರಯತ್ನಪಟ್ಟರು. ಆದರೆ ಸಫಲರಾಗಲಿಲ್ಲ.

ಮ್ಯಾಡಿಸನ್ ನಗರದ ಸಮುದಾಯ ಚರ್ಚ್‌ನಲ್ಲಿ 'ಭಾರತದ ಧರ್ಮಗಳು' ಎಂಬ ವಿಷಯದ ಬಗ್ಗೆ ಸ್ವಾಮೀಜಿ ಪ್ರವಚನವನ್ನು ಮಾಡಿದರು. ಇದನ್ನು ಡೈಲಿ ಕಾರ್ಡಿನಲ್ ಎಂಬ ಪತ್ರಿಕೆಯು ತನ್ನ ನವೆಂಬರ್ ೧೧, ೧೮೯೩ರ ಸಂಚಿಕೆಯಲ್ಲಿ ವಿವರವಾಗಿ ಪ್ರಕಟಿಸಿತು. ಇದರ ಭಾಗಗಳನ್ನು ಇಲ್ಲಿ ನೋಡೋಣ:

''ಸ್ವಾಮಿ ವಿವೇಕಾನಂದರು ಸಮುದಾಯ ಚರ್ಚ್‌ನಲ್ಲಿ ಕಿಕ್ಕಿರಿದ ಸಭಿಕರಿಗೆ ಭಾಷಣವನ್ನು ಮಾಡಿದರು. ಅವರು ತಮ್ಮ ದೇಶದ ಸಾಂಪ್ರದಾಯಿಕ ಪೋಷಾಕನ್ನು ಧರಿಸಿದ್ದರು. ಅವರ ಪ್ರವಚನದ ಮೊದಲ ಭಾಗದಲ್ಲಿ ಹಿಂದೂಗಳ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಕೆಲವು ಶ್ಲೋಕಗಳನ್ನು ಉಚ್ಚರಿಸಿದರು. *ಸಾಲ್ವೇಷನ್* ಎನ್ನುವುದಕ್ಕೆ ಹಿಂದೂಗಳ ಭಾಷೆಯಲ್ಲಿ ಶಬ್ದವಿಲ್ಲ. ಅವರ ಕಲ್ಪನೆ ಬಂಧನದಿಂದ ಮೋಕ್ಷ. ಮಾನವನ ನೈಜಸ್ವರೂಪವು ಪರಿಪೂರ್ಣವಾದುದು ಎಂದು ಹಿಂದೂಗಳು ನಂಬುತ್ತಾರೆ. ಹಾಗೂ ಕಾರ್ಯ-ಕಾರಣವಾದವನ್ನು ಒಪ್ಪಿಕೊಳ್ಳುತ್ತಾರೆ. ಸ್ವಾಮಿ ವಿವೇಕಾನಂದರು ಒಂದು ಆನೆ ಮತ್ತು ಕುರುಡರ ಕತೆಯನ್ನು ಹೇಳಿದರು. ಕುರುಡರ ಹಾಗೆಯೇ ವಿವಿಧ ಧರ್ಮಗಳು ಅಖಂಡ ಸತ್ಯದ ಒಂದು ಭಾಗವನ್ನು ಮಾತ್ರವೇ ನೋಡುತ್ತವೆ. ಆದರೆ, ಹಿಂದೂ ನಂಬಿಕೆಯು ಅತ್ಯಂತ ವಿಶಾಲವಾದುದು. ಹಿಂದೂಗಳು ಧರ್ಮದ ಹೆಸರಿನಲ್ಲಿ ದಬ್ಬಾಳಿಕೆಯನ್ನು ಮಾಡುವುದಿಲ್ಲ. ಭಾರತದಲ್ಲಿ ಒಬ್ಬನಾದರೂ ಕ್ರೈಸ್ತ ಪಾದ್ರಿಯ ಮೇಲೆ ದಬ್ಬಾಳಿಕೆ ನಡೆದಿದ್ದರೆ ತೋರಿಸಿ ಎಂದು ಸ್ವಾಮಿಗಳು ಸವಾಲು ಹಾಕಿದರು. ಒಬ್ಬ ಗ್ರೀಕ್ ಇತಿಹಾಸಕಾರನು ಹಿಂದೂಗಳ ಬಗ್ಗೆ ಹೀಗೆ ಬರೆದಿದ್ದಾನೆ: 'ಯಾವ ಹಿಂದುವೂ ಅಪ್ರಮಾಣಿಕನಲ್ಲ, ಯಾವ ಹಿಂದೂ ಸ್ತ್ರೀಯೂ ದುಶ್ಶೀಲೆಯಲ್ಲ' ಎಂದು.''

ಮ್ಯಾಡಿಸನ್ ನಗರದಿಂದ ಸ್ವಾಮೀಜಿ ರಾತ್ರಿ ಪ್ರಯಾಣದ ಮೂಲಕ ೨೫೦ ಮೈಲುಗಳ ದೂರದಲ್ಲಿದ್ದ ಮಿನ್ನಿಯಾಪೊಲಿಸ್ ನಗರಕ್ಕೆ ಹೊರಟರು. ಈ ನಗರವು ಆಗ ೧೬೦,೦೦೦ ಜನಸಂಖ್ಯೆಯನ್ನು ಹೊಂದಿತ್ತು. ಇದೊಂದು ಅತಿಶಯವೇ ಸರಿ. ಈ ನಗರ ಮತ್ತು ಮಿಸ್ಸಿಸಿಪಿ ನದಿಯ ಆಚೆಯ ದಡದಲ್ಲಿದ್ದ ಸೈಂಟ್ ಪೌಲ್ - ಇವೆರಡೂ ಸೇರಿ ಅಮೆರಿಕದ ಮಧ್ಯಪಾಶ್ಚಾತ್ಯಭಾಗದ ರಾಜಧಾನಿಯಂತೆ ಇದ್ದವು. ಸ್ವಾಮೀಜಿ ೧೮೯೩ರ ನವೆಂಬರ್ ೨೧ ಮಂಗಳವಾರದಂದು ಬೆಳಗ್ಗೆ ಅಲ್ಲಿಗೆ ತಲುಪಿದರು. ಆದರೆ ೨೪ನೆಯ ತಾರೀಖಿನವರೆಗೂ ಅವರ ಪ್ರವಚನವು ನಿಗದಿಯಾಗಿರಲಿಲ್ಲ. ಏತನ್ಮಧ್ಯೆ ಅವರು ನಮಗೆ ಇನ್ನೂ ಗೊತ್ತಿಲ್ಲದ, ತಮ್ಮ ಹಲವಾರು ಸ್ನೇಹಿತರೊಡನೆ ಒಡನಾಡಿದರು. ಮುಖ್ಯವಾಗಿ ತೀವ್ರವಾಗಿ ಶೀತದ ದೆಸೆಯಿಂದ ಸಂಪೂರ್ಣವಾಗಿ ಘನೀ

ಭೂತವಾಗಿ ಹೋಗಿದ್ದ ಹತ್ತಿರದ ಒಂದು ನದಿಯಲ್ಲಿ ಸ್ಕೀಯಿಂಗ್ ಮಾಡಿ, ಬಹಳ ಆನಂದಪಟ್ಟರು. ಇದಲ್ಲದೆ, ಅವರ ಸ್ನೇಹಿತರು ಸ್ವಾಮೀಜಿಯವರಿಗೆ ನಗರದ ಸೌಂದರ್ಯವನ್ನು, ಒಂದು ಸರೋವರವನ್ನು ಮತ್ತು ಎಲ್ಲೆಲ್ಲಿಯೂ ಮಂಜುಕವಿದ ಅದ್ಭುತ ಪ್ರಪಂಚವನ್ನು ತೋರಿಸಿದರು. ಹಾಗೆಯೇ ಸ್ವಾಮೀಜಿ, ಕುದುರೆಗಳು ಎಳೆಯುತ್ತಿದ್ದ, ಮಂಜಿನ ಮೇಲೆ ಓಡಾಡುವ ಗಾಡಿಗಳಲ್ಲಿ ಓಡಾಡಿದರು. ನವೆಂಬರ್ ೨೩ರಂದು ಸ್ವಾಮೀಜಿ ಮಿನ್ನೆಹಾಹಾ ಜಲಪಾತವನ್ನು ನೋಡಲು ಹೋದರು. ಬೇಸಿಗೆ ಕಾಲಕ್ಕಿಂತಲೂ, ಚಳಿಗಾಲದಲ್ಲಿಯೇ ಅದರ ಸೌಂದರ್ಯ ಅಧಿಕವಾಗಿ ಇರುವುದಂತೆ. ಅದರ ವರ್ಣನೆ ಹೀಗಿದೆ: 'ಐವತ್ತು ಅಡಿಗಳ ಘನೀಭೂತವಾದ ಮಂಜಿನ ಪರ್ವತವು ಪ್ರಖರವಾದ ಸೂರ್ಯನ ಬೆಳಕಿನಲ್ಲಿ ಬೆಳಗುತ್ತಿರುತ್ತದೆ.' ಅಂದಿನ ದಿನವೇ ಮಿನ್ನಿಯಾಪೊಲಿಸ್ ನಗರದ ಪತ್ರಿಕೆ 'ಮಿನ್ನಿಯಾಪೊಲಿಸ್ ಟ್ರೈಬ್ಯೂನ್'ನ ವರದಿಗಾರನೊಬ್ಬ ಸ್ವಾಮೀಜಿಯವರ ಸಂದರ್ಶನವನ್ನು ಮಾಡಿದನು. ಈ 'ಬ್ರಹ್ಮ ಪುರೋಹಿತ'ರಿಂದ (ಇದು ಅವನ ವಿವರಣೆ!) ಆಕರ್ಷಿತನಾದನು. ಸ್ವಾಮೀಜಿ ಸೊನ್ನೆ ಡಿಗ್ರಿಗಳಿಗಿಂತಲೂ ಎಷ್ಟೋ ಕಡಮೆಯಿದ್ದ ಮಿನ್ನಿಯಾಪೊಲಿಸ್ ನಗರದ ಶೀತ ಹವಾಮಾನವನ್ನು ಪೂರ್ಣವಾಗಿ ಆನಂದಿಸಿದರು. ಶೀತವನ್ನು ತಡೆದುಕೊಳ್ಳಲು ಆವಶ್ಯಕವಾದ ಬಟ್ಟೆಗಳು ಕೂಡ ಅವರಲ್ಲಿ ಸಾಕಷ್ಟು ಇತ್ತು.

ಸ್ವಾಮೀಜಿ ಮಿಸೆಸ್ ಹೇಲ್ ಅವರಿಗೆ ಈ ನಗರದಿಂದ ೧೮೯೩ರ ನವೆಂಬರ್ ೨೪ರ ಂದು ಪತ್ರ ಬರೆಯುತ್ತಾರೆ. ತಾವು ಇನ್ನೂ ಮಿನ್ನಿಯಾಪೊಲಿಸ್‌ನಲ್ಲಿಯೇ ಇರುವುದಾಗಿಯೂ, ಅಂದು ಮಧ್ಯಾಹ್ನ ಪ್ರವಚನವನ್ನು ಮುಗಿಸಿಕೊಂಡು, ಮರುದಿನ  ಡೆ ಮೊಯ್ನೆಸ್ ನಗರಕ್ಕೆ ತೆರಳುವುದಾಗಿಯೂ ಹೇಳಿಕೊಳ್ಳುತ್ತಾರೆ. ಸ್ವಾಮೀಜಿ ಬಂದ ದಿನವೇ ಆ ವರ್ಷದ ಮೊದಲ ಹಿಮಪಾತವನ್ನು ಅಲ್ಲಿನ ಜನರು ಕಂಡರು. ಇಡೀ ದಿನ ಬೆಳಗ್ಗೆ ಮತ್ತು ಇಡೀ ರಾತ್ರಿ ಹಿಮಪಾತವಾಯಿತು. ಅಂದು ಸ್ವಾಮೀಜಿ ಮೇಲೆ ವಿವರಿಸಿದ ಹಿಮಾಚ್ಛಾದಿತ ಜಲಪಾತವನ್ನು ನೋಡಲು ಹೋದರು. ಸ್ವಾಮೀಜಿ ಬರೆಯುತ್ತಾರೆ, ''ಇಂದಿನ ದಿನ (೨೪, ನವೆಂಬರ್) ತಾಪಮಾನ ಮೈನಸ್ ೨೧ ಡಿಗ್ರಿಗಳು'' ಎಂದು. ತಾವು ಹಿಮದಲ್ಲಿನ ಓಡಾಟವನ್ನು ಬಹಳ ಆನಂದಪಟ್ಟಿದ್ದಾಗಿಯೂ, ಅತಿ ಶೀತದಿಂದ, ತಮ್ಮ ಕಿವಿಗಳ ಮತ್ತು ಮೂಗಿನ ತುದಿಗಳನ್ನು ಕಳೆದುಕೊಳ್ಳುವ ಭಯ ತಮಗೆ ಸ್ವಲ್ಪವೂ ಆಗಲಿಲ್ಲವೆಂದೂ ಹೇಳಿಕೊಳ್ಳುತ್ತಾರೆ. ಅಮೆರಿಕದ ಎಲ್ಲ ದೃಶ್ಯಗಳಿಗಿಂತಲೂ ಈ ಹಿಮಪಾತದ ದೃಶ್ಯವು ತಮ್ಮನ್ನು ಬಹಳಷ್ಟು ಉಲ್ಲಾಸಗೊಳಿಸಿತು ಎಂದು ಸ್ವಾಮೀಜಿ ಬಣ್ಣಿಸುತ್ತಾರೆ.

ಸ್ವಾಮಿ ವಿವೇಕಾನಂದರು  ಮಿನ್ನಿಯಾಪೊಲಿಸ್ ನಗರದ ತಮ್ಮ ಪ್ರಥಮ ಸಾರ್ವಜನಿಕ ಭಾಷಣವನ್ನು ೧೮೯೩ರ ನವೆಂಬರ್ ೨೪, ಶುಕ್ರವಾರದಂದು ಮಾಡಿದರು. ಮರುದಿನ ಮಿನ್ನಿಯಾಪೊಲಿಸ್ ಸ್ಟಾರ್ ಪತ್ರಿಕೆಯು ಹೀಗೆ ವರದಿಮಾಡಿತು:

''ಹಿಂದೂಧರ್ಮದ ಪ್ರಾಚೀನ ಮತ್ತು ನಿತ್ಯಸತ್ಯ ತತ್ತ್ವಗಳು ಎನ್ನುವುದೇ ಹಿಂದಿನ ದಿನದ ಸಂಜೆ ಫಸ್ಟ್ ಯುನಿಟೇರಿಯನ್ ಚರ್ಚ್‌ನಲ್ಲಿ ಜರುಗಿದ ಸ್ವಾಮಿ ವಿವೇಕಾನಂದರ ಭಾಷಣದ ವಿಷಯವಾಗಿತ್ತು. ಸಭಿಕರಲ್ಲಿ ಚಿಂತಕರಾದ ಸ್ತ್ರೀಪುರುಷರಿದ್ದರು. ಪೆರಿಪ್ಯಾಟಿಕ್ಸ್ ಕ್ಲಬ್ ಸಂಸ್ಥೆಯು ಸ್ವಾಮಿಗಳನ್ನು ಆಹ್ವಾನಿಸಿತ್ತು. ಅದರಲ್ಲಿ ಅನೇಕ ಧಾರ್ಮಿಕ ಗುಂಪುಗಳಿಗೆ ಸೇರಿದ ಹಲವಾರು ಸ್ನೇಹಿತರಿದ್ದಾರೆ. ಹಾಗೆಯೇ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಕೂಡ ಇದರ ಸದಸ್ಯರಾಗಿದ್ದಾರೆ. ಸ್ವಾಮಿ ವಿವೇಕಾನಂದರು ಹಿಂದೂಧರ್ಮದ ಸಂನ್ಯಾಸಿಯಾಗಿದ್ದಾರೆ. ಅವರು ತಮ್ಮ ದೇಶದ ಪೋಷಾಕನ್ನು ಧರಿಸಿ, ವೇದಿಕೆಯನ್ನು ಅಲಂಕರಿಸಿದರು. ಕಿತ್ತಳೆ ಬಣ್ಣದ ಉಡುಪನ್ನು ಧರಿಸಿದ್ದರು ಮತ್ತು ಅದೇ ಬಣ್ಣದ ಪೇಟವನ್ನು ತಲೆಯ ಮೇಲೆ ಸುತ್ತಿಕೊಂಡಿದ್ದರು.

''ಸ್ವಾಮಿ ವಿವೇಕಾನಂದರು ತಮ್ಮ ಧರ್ಮದ ವಿಷಯಗಳನ್ನು ಪ್ರಾಮಾಣಿಕತೆಯಿಂದ ಪ್ರಸ್ತುತಪಡಿಸಿದರು. ನಿಧಾನವಾಗಿ, ಸ್ಪಷ್ಟವಾಗಿ ಅವರು ಮಾತನಾಡುತ್ತಿದ್ದರು. ತಮ್ಮ ಭಾಷಣದ ಗಾಂಭೀರ್ಯತೆಯಿಂದ ಅವರ ಸಭಿಕರ ಹೃದಯವನ್ನು ಸೆಳೆದುಕೊಂಡರೇ ಹೊರತು, ಭಾಷಣದ ತೀವ್ರಗತಿಯಿಂದಲ್ಲ. ಅವರು ಪದಗಳನ್ನು ಬಹಳ ಜಾಗರೂಕತೆಯಿಂದ ಆಡುತ್ತಿದ್ದರು. ಪ್ರತಿಯೊಂದು ಪದದ ಅರ್ಥವೂ ನೇರವಾಗಿರುತ್ತಿತ್ತು. ಅವರು ಹಿಂದೂಧರ್ಮದ ಸರಳ ತತ್ತ್ವಗಳನ್ನು ಜನಗಳಿಗೆ ತಿಳಿಸಿಹೇಳಿದರು. ಕ್ರೈಸ್ತಧರ್ಮದ ಬಗ್ಗೆ ಕಠೋರವಾಗಿ ಏನನ್ನೂ ಹೇಳದಿದ್ದರೂ, ಹಿಂದೂಧರ್ಮದ ಶ್ರೇಷ್ಠತೆಯನ್ನು ಕೊಂಡಾಡಿದರು. ಅವರ ಪ್ರಕಾರ ಹಿಂದೂಧರ್ಮದ ಸರ್ವವ್ಯಾಪಕ ಚಿಂತನೆ ಮತ್ತು ಅಗ್ರಗಾಮಿ ತತ್ತ್ವವೆಂದರೆ ಜೀವಿಯಲ್ಲಿ ಸುಪ್ತವಾಗಿರುವ ದಿವ್ಯತೆ ಹಾಗೂ ಆತ್ಮದ ಪರಿಪೂರ್ಣತೆ. ಸ್ವಾಮಿಗಳು ಹೇಳುವಂತೆ, ಧರ್ಮವೆಂದರೆ ಮಾನವನಲ್ಲಿ ಈಗಾಗಲೇ ಸುಪ್ತವಾಗಿರುವ ದಿವ್ಯತೆಯ ಅಭಿವ್ಯಕ್ತಿ. ಇದಲ್ಲದೆ ಸ್ವಾಮಿ ವಿವೇಕಾನಂದರು, ವರ್ತಮಾನವೆಂಬುದು ಭೂತಕಾಲ ಮತ್ತು ಭವಿಷ್ಯತ್ ಕಾಲಗಳ ವ್ಯತ್ಯಾಸವಷ್ಟೇ ಎಂದು ಪ್ರತಿಪಾದಿಸಿದರು. ಮಾನವನಲ್ಲಿ ಎರಡು ಮನೋಭಾವಗಳಿವೆ. ಇವುಗಳಲ್ಲಿ ಸದ್ಭಾವನೆಯು ಅವನನ್ನು ಉನ್ನತ ಸ್ತರಗಳಿಗೆ ಒಯ್ಯುತ್ತದೆ; ದುರ್ಭಾವನೆಯು ಅಧೋಗತಿಗೆ ಇಳಿಸುತ್ತದೆ.''

ಸ್ವಾಮೀಜಿ ಭಾನುವಾರ, ನವೆಂಬರ್ ೨೬ರ ಬೆಳಗ್ಗೆ ಇದೇ ಚರ್ಚಿನಲ್ಲಿ ಇನ್ನೊಂದು ಪ್ರವಚನವನ್ನು ನೀಡಿದರು. ಇದು ಪೂರ್ವನಿರ್ಧಾರಿತವಾಗಿರಲಿಲ್ಲ. ಇದರ ವರದಿಯನ್ನು 'ಮಿನ್ನಿಯಾಪೊಲಿಸ್ ಜರ್ನಲ್' ಎಂಬ ಪತ್ರಿಕೆಯು ನವೆಂಬರ್ ೨೭, ಸೋಮವಾರದ ತನ್ನ ಸಂಚಿಕೆಯಲ್ಲಿ ಪ್ರಕಟಿಸಿತು.

ಸ್ವಾಮಿ ವಿವೇಕಾನಂದರು ಧರ್ಮಗಳ ನಡುವಿನ ಸಂಘರ್ಷದ ಬಗ್ಗೆ ಪ್ರಸ್ತಾಪಿಸಿ, ಆನೆ ಮತ್ತು ಕುರುಡರ ಕತೆಯನ್ನು ಹೇಳಿದರು. ಪಾಶ್ಚಾತ್ಯ ಜನರು ತಮ್ಮ ದೇವರೇ ಶ್ರೇಷ್ಠ ಎಂದು ಭಾವಿಸುತ್ತಾರೆ, ಪೂರ್ವದೇಶಗಳ ಜನರೂ ಹೀಗೆಯೇ ಭಾವಿಸುತ್ತಾರೆ. ಇಬ್ಬರದೂ ತಪ್ಪುಭಾವನೆ. ಭಗವಂತನು ಎಲ್ಲ ಧರ್ಮ

ಗಳಲ್ಲಿಯೂ ಸಮನಾಗಿಯೇ ಇರುತ್ತಾನೆ. ಸ್ವಾಮಿಗಳು ಪಾಶ್ಚಾತ್ಯ ಕ್ರೈಸ್ತಧರ್ಮೀಯರನ್ನು ಕಟುವಾಗಿ ವಿಮರ್ಶೆಗೆ ಒಳಪಡಿಸಿದರು. ಇಲ್ಲಿ ನೋಡುವುದು ವ್ಯಾಪಾರಿ ಧರ್ಮ. 'ದೇವರೇ ಇದನ್ನು ಕೊಡು, ಅದನ್ನು ಕೊಡು' ಎಂದು ಗೋಗೆರೆಯುವುದೇ ಧರ್ಮವಾಗಿಬಿಟ್ಟಿದೆ. ಹಿಂದೂವಿಗೆ ಧರ್ಮದ ಈ ರೀತಿ ಅರ್ಥವಾಗುವುದಿಲ್ಲ. ಈ ರೀತಿ ಬೇಡುವ ಬದಲು ಧಾರ್ಮಿಕ ವ್ಯಕ್ತಿಯು ದಾನ ಮಾಡಬೇಕು ಎಂದು ಅವನು ಅಭಿಪ್ರಾಯಪಡುತ್ತಾನೆ. ಹಿಂದೂ ವ್ಯಕ್ತಿಯು ಭಗವಂತನಿಗೇ ತಾನು ನೀಡಬೇಕು ಎಂದು ಬಯಸುತ್ತಾನೆ. ಪಾಶ್ಚಾತ್ಯ ಜನರು ಎಲ್ಲವೂ ಸರಿಯಾಗಿರುವಾಗ ಭಗವಂತನನ್ನು ನೆಚ್ಚಿಕೊಂಡಿರುತ್ತಾರೆ. ಪರಿಸ್ಥಿತಿ ಪ್ರತಿಕೂಲವಾದಾಗ, ಭಗವಂತನನ್ನು ಮರೆತೇ ಬಿಡುತ್ತಾರೆ. ಆದರೆ ಹಿಂದೂ ಹಾಗಲ್ಲ. ಅವನು ಭಗವಂತನನ್ನು ಪರಮಪ್ರೇಮರೂಪವೆಂಬಂತೆ ಕಾಣುತ್ತಾನೆ. ಹಿಂದೂಧರ್ಮವು ಭಗವಂತನ ಮಾತೃಸ್ವರೂಪಕ್ಕೆ ಮನ್ನಣೆ ಕೊಡುತ್ತದೆ. ಹಾಗೆಯೇ ಭಗವಂತನು ತಂದೆಯೂ ಹೌದು ಎಂದು ಹೇಳುತ್ತದೆ. ಪಾಶ್ಚಾತ್ಯ ಕ್ರೈಸ್ತನಿಗೆ ಡಾಲರುಗಳೇ ದೇವರು. ಇಡೀ ವಾರ ಅದಕ್ಕಾಗಿಯೇ ದುಡಿಯುತ್ತಾನೆ. ಅದರಲ್ಲಿ ಅವನು ಸಫಲನಾದರೆ, ಭಗವಂತನಿಗೆ ಧನ್ಯವಾದಗಳನ್ನು ಸಮರ್ಪಿಸುತ್ತಾನೆ. ಆ ಎಲ್ಲ ಹಣವನ್ನು ತನ್ನ ಉದ್ದನೆಯ ಜೋಬಿನಲ್ಲಿ ಹಾಕಿಕೊಳ್ಳುತ್ತಾನೆ. ಹಿಂದೂ ಭಕ್ತ ಕೂಡ ಹಣ ಸಂಪಾದಿಸುತ್ತಾನೆ. ಅದನ್ನು ಬಡವರಿಗೆ ಮತ್ತು ದುರದೃಷ್ಟವಂತರಿಗೆ ದಾನ ಮಾಡುವ ಮೂಲಕ ಭಗವಂತನನ್ನು ಪೂಜಿಸುತ್ತಾನೆ. ಹೀಗೆ ಪಾಶ್ಚಾತ್ಯ ಧರ್ಮರೀತಿಗೂ, ಪೌರಸ್ತ್ಯ ಧರ್ಮರೀತಿಗೂ ಇರುವ ಅನೇಕ ವ್ಯತ್ಯಾಸಗಳನ್ನು ಸ್ವಾಮಿ ವಿವೇಕಾನಂದರು ಎತ್ತಿ ತೋರಿಸಿದರು.

ದೇವರ ಬಗ್ಗೆ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಪಾಶ್ಚಾತ್ಯರಾದ ನೀವು ನಿಮಗೆ ಭಗವಂತ ದೊರಕಿದ್ದಾನೆ ಎಂದು ಭಾವಿಸುತ್ತೀರಿ. ನಿಮ್ಮಲ್ಲಿ ದೇವರಿದ್ದರೆ, ಅದೇಕೆ ಇಷ್ಟೊಂದು ಕ್ರೌರ್ಯವಿದೆ? ಅದೇಕೆ ನಿಮ್ಮಲ್ಲಿ ಹತ್ತರಲ್ಲಿ ಒಂಭತ್ತು ಜನ ಕಪಟಿಗಳಾಗಿದ್ದಾರೆ? ಎಲ್ಲಿ ಜನರು ಕಪಟಿಗಳಾಗಿರುತ್ತಾರೋ, ಅಲ್ಲಿ ಭಗವಂತನು ಕಾಣಬರುವುದಿಲ್ಲ. ಭಗವಂತನ ಆರಾಧನೆಗಾಗಿ ನೀವು ಅರಮನೆಗಳನ್ನೇ ನಿರ್ಮಿಸಿದ್ದೀರಿ. ಅಲ್ಲಿ ವಾರಕ್ಕೆ ಒಂದು ಸಲ ಸೇರುತ್ತೀರಿ. ಆದರೆ ನಿಮ್ಮಲ್ಲಿ ಅತ್ಯಲ್ಪ ಸಂಖ್ಯೆಯವರು ಮಾತ್ರವೇ ನಿಜವಾಗಿಯೂ ಭಗವಂತನ ಆರಾಧನೆಯನ್ನು ಮಾಡುತ್ತೀರಿ. ಪಾಶ್ಚಾತ್ಯ ದೇಶಗಳಲ್ಲಿ ಚರ್ಚ್‌ಗೆ ಹೋಗುವುದು ಒಂದು ಪ್ರತಿಷ್ಠೆಯಾಗಿಬಿಟ್ಟಿದೆ. ನೀವು ಚರ್ಚಿಗೆ ಹೋಗುವುದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ಹೀಗಿರುವಾಗ, ನೀವು ದೇವರು ನಮ್ಮವನು ಎಂದು ಹೇಳಿಕೊಳ್ಳುವುದು ಎಷ್ಟು ನ್ಯಾಯ?''

ಆಶ್ಚರ್ಯವೆಂದರೆ ಪಾಶ್ಚಾತ್ಯಜನರ ಪೊಳ್ಳು ಧಾರ್ಮಿಕತೆಯನ್ನು ಸ್ವಾಮೀಜಿ ಹೀಗೆ ಕಟುವಾಗಿ ಟೀಕಿಸಿದಾಗ, ಸಭಿಕರು ಪ್ರಚಂಡ ಕರತಾಡನವನ್ನು ಮಾಡಿದರು!

ಈ ಪ್ರವಚನವಾದ ನಂತರ, ಒಂದು ದಿನವೂ ವಿಶ್ರಾಂತಿಯನ್ನು ಪಡೆದುಕೊಳ್ಳದೆ, ಸ್ವಾಮಿ ವಿವೇಕಾನಂದರು ೨೯೦ ಮೈಲುಗಳ ದೂರ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಿ ಡೆ ಮೊಯ್ನೆಸ್ ನಗರವನ್ನು ತಲುಪಿದರು. ಅವರು ಪ್ರಯಾಣ ಮಾಡುತ್ತಿರುವಾಗ ದೇವಭೀರುವಾದ ಒಬ್ಬ ಕೌಬಾಯ್ ಅನ್ನು ಭೇಟಿಮಾಡಿದರು. ಅವನಿಗೆ ಸ್ವಾಮೀಜಿಯವರ ಧರ್ಮ ಯಾವುದು ಎನ್ನುವುದು ಗೊತ್ತಿರಲಿಲ್ಲ. ಆದರೆ ಒಬ್ಬ ಸಹಪ್ರಯಾಣಿಕನಿಂದ ಸ್ವಾಮಿ ವಿವೇಕಾನಂದರು ಕ್ರೈಸ್ತರಲ್ಲವೆಂದು ಅವನು ಕೇಳಿ ತಿಳಿದನು. ಖಂಡಿತವಾಗಿ ಈತನು (ಸ್ವಾಮೀಜಿ) ನರಕಕ್ಕೇ ಹೋಗುವನೆಂದು ನಿಶ್ಚಿತವಾಗಿ ಘೋಷಿಸಿಬಿಟ್ಟನು!

ಸ್ವಾಮೀಜಿಯವರ ಈ ಉಪನ್ಯಾಸ ಪ್ರವಾಸದಲ್ಲಿ ಅವರನ್ನು ನಾವು ಹಿಂಬಾಲಿಸುತ್ತಿದ್ದೇವೆ. ಆಗೆಲ್ಲ ಅವರು ಒಂದು ನಗರದಿಂದ ಇನ್ನೊಂದು ನಗರಕ್ಕೆ ಧಾವಿಸುತ್ತಿದ್ದರು. ಅದಕ್ಕಾಗಿ ಗಂಟೆಗಟ್ಟಲೆ, ದಿನಗಟ್ಟಲೆ, ರೈಲ್ವೇ ಬೋಗಿಗಳಲ್ಲಿಯೇ ತಮ್ಮ ಸಮಯವನ್ನು ಕಳೆಯುತ್ತಿದ್ದರು. ಏಕೆಂದರೆ ಎರಡು ಉಪನ್ಯಾಸ ಸ್ಥಳಗಳ ನಡುವೆ ಅವರು ನೂರಾರು ಮೈಲುಗಳಷ್ಟು ಪ್ರಯಾಣ ಮಾಡಬೇಕಾಗಿತ್ತು. ಆ ಕಾಲದಲ್ಲಿ ಅಮೆರಿಕೆಯ ಗ್ರೇಟ್ ನಾರ್ತರನ್ ರೈಲ್ವೇ ಕಂಪನಿಯು ಸೊಗಸಾದ 'ಕೌಟುಂಬಿಕ ಪ್ರಯಾಣಿಕರ ಬೋಗಿ'ಗಳನ್ನು ಚಾಲನೆಗೆ ಬಿಟ್ಟಿತ್ತು. ಅಲ್ಲಿ ಜನರು ಸೌಹಾರ್ದವಾಗಿ ಮಾತುಕತೆಯಾಡಬಹುದಿತ್ತು. ಸ್ವಾಮೀಜಿಯವರ ದಿವ್ಯ ಸಂಗವನ್ನು ಅನೇಕ ಪ್ರಯಾಣಿಕರು ಪಡೆದಿರಬೇಕು. ಅವರಲ್ಲಿ ಕೌಬಾಯ್‌ಗಳು, ರೈತರು, ವ್ಯಾಪಾರಗಾರರು, ಪಾದ್ರಿಗಳು, ಸಮಾಜ ಸುಧಾಕರು ಮತ್ತು ಸುಧಾರಣೆಯ ಆವಶ್ಯಕತೆ ಇದ್ದವರು – ಎಲ್ಲರೂ ಸೇರಿದ್ದರು. ಅವರೆಲ್ಲರೂ ಸ್ವಾಮೀಜಿಯವರ ಪ್ರವಚನಗಳನ್ನು ಕೇಳುವ ಸದವಕಾಶವನ್ನು ಪಡೆದುಕೊಳ್ಳದೇ ಇರಬಹುದು. ಆದರೆ ಸ್ವಾಮೀಜಿಯವರ ಪುಣ್ಯದರ್ಶನ ಮತ್ತು ಅಲ್ಪಸ್ವಲ್ಪ ಮಾತುಕತೆಯೇ ಅವರಲ್ಲಿ ಮಹತ್ತರವಾದ ಪರಿಣಾಮವನ್ನು ಉಂಟುಮಾಡಿರಬೇಕು. ನಿಜಕ್ಕೂ ಅವರೆಲ್ಲರೂ ಪುಣ್ಯಾತ್ಮರೇ ಸರಿ.

ಸ್ವಾಮೀಜಿ ಡೆ ಮೊಯ್ನೆಸ್ ನಗರದಲ್ಲಿ ಬಂದಿಳಿದರು. ಸೋಮವಾರ, ನವೆಂಬರ್ ೨೭ರಂದು ಮಧ್ಯಾಹ್ನ ಒಂದು ಅನೌಪಚಾರಿಕ ಭಾಷಣವನ್ನು ನೀಡಿದರು. ಅದೇ ಸಾಯಂಕಾಲ ಅಧಿಕೃತ ಪ್ರವಚನವನ್ನು ಮಾಡಿದರು. ಮೊದಲ ಭಾಷಣ ನಡೆದಿದ್ದು ರೆವೆರೆಂಡ್ ಹಾರ್ವೆ ಓ ಬ್ರೀಡನ್ ಅವರ ಮನೆಯಲ್ಲಿ. ಇದನ್ನು ಟೂರಿಸ್ಟ್ ಕ್ಲಬ್ ಎಂಬ ಸಂಸ್ಥೆಯು ಆಯೋಜಿಸಿತು. ಈ ಕಾರ್ಯಕ್ರಮ ಬಹಳ ಯಶಸ್ವಿಯಾಯಿತು. ಒಂದು ಸಣ್ಣ ಗುಂಪಿಗೆ ಸ್ವಾಮೀಜಿ ನೀಡಿದ ಈ ಭಾಷಣದ ವರದಿಯನ್ನು ನವೆಂಬರ್ ೨೮, ೧೮೯೩ರ 'ಡೈಲಿ ನ್ಯೂಸ್' ಎಂಬ ಪತ್ರಿಕೆ ವರದಿ ಮಾಡಿತು. ಇಲ್ಲಿ ಸ್ವಾಮೀಜಿ ಮುಖ್ಯವಾಗಿ ಭಾರತದ ಜನರ ಉಡುಪು, ನಡವಳಿಕೆ ಮತ್ತು ಸಂಪ್ರದಾಯಗಳ ಬಗ್ಗೆ ಮಾತನಾಡಿದರು. ಹಾಗೆಯೇ ಸ್ವಾಮೀಜಿ ಪುಂಖಾನುಪುಂಖವಾಗಿ ಸಭಿಕರಿಂದ ಬರುತ್ತಿದ್ದ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿದರು.

ಅಂದು ಸಂಜೆ ಸೆಂಟ್ರಲ್ ಚರ್ಚ್ ಆಫ್ ಕ್ರೈಸ್ಟ್‌ನಲ್ಲಿ ಸ್ವಾಮೀಜಿ ಭಾಷಣ ಮಾಡಿದರು. 'ಮಹಾನ್ ಪೌರಸ್ತ್ಯ ವಿದ್ವಾಂಸರೂ, ಹಿಂದೂ ಸಂನ್ಯಾಸಿಯೂ ಆದ ಸ್ವಾಮಿ ವಿವೇಕಾನಂದರು ಆಕರ್ಷಣೀಯ ವ್ಯಕ್ತಿ. ಏಕೆಂದರೆ ಅವರ ಭಾಷಣಕ್ಕೆ ಎಲ್ಲ ಟಿಕೆಟ್‌ಗಳೂ ಬಹು ಮುಂಚೆಯೇ ವಿಕ್ರಯವಾಗಿಬಿಟ್ಟಿವೆ' ಎಂದು ನವೆಂಬರ್ ೨೫ರಂದೇ ಡೈಲಿ ನ್ಯೂಸ್ ವರದಿ ಮಾಡಿತ್ತು. ನವೆಂಬರ್ ೨೮ ರಂದು ಇದೇ ಪತ್ರಿಕೆ ಘೋಷಿಸಿತು, 'ಯಾವ ಚಿಂತನಾಶೀಲ ವ್ಯಕ್ತಿಯೂ ಇದನ್ನು ತಪ್ಪಿಸಿಕೊಳ್ಳಬಾರದು' ಎಂದು.

ಮರುದಿನ ಡೈಲಿ ಐಯೋವಾ ಕ್ಯಾಪಿಟಲ್ ಮತ್ತು ಡೆ ಮೊಯ್ನೆಸ್ ಡೈಲಿ ನ್ಯೂಸ್ - ಎರಡೂ ಪತ್ರಿಕೆಗಳು ಸ್ವಾಮೀಜಿಯವರ ಭಾಷಣದ ವಿಸ್ತೃತ ವರದಿಯನ್ನು ಪ್ರಕಟಿಸಿದವು. ಅದರಲ್ಲಿ ಮೊದಲ ಪತ್ರಿಕೆಯ ವರದಿಯ ಭಾಗಗಳು ಹೀಗಿವೆ:

''ಡೆ ಮೊಯ್ನೆಸ್ ನಗರದ ಜನರಿಗೆ ಇದೊಂದು ಅಪೂರ್ವ ಅವಕಾಶವೇ ಸರಿ. ಪುರಾತನ ಹಿಂದೂಧರ್ಮದ ಸಂನ್ಯಾಸಿಯೊಬ್ಬರು ತಮ್ಮ ಧರ್ಮದ ಸಂತೋಷಜನಕವಾದ ಪ್ರಸ್ತುತಿಯನ್ನು ಮಾಡಿದರು. ಅದರ ವೈಶಿಷ್ಟ್ಯಗಳನ್ನು ಮತ್ತು ಅಂತರ್ಗತವಾದ ತತ್ತ್ವಗಳನ್ನು ಪರಿಚಯಿಸಿದರು. ಬಹಳ ದೊಡ್ಡ ಜನಸಂದಣಿ ಅವರ ಪ್ರವಚನವನ್ನು ಕೇಳಲು ನೆರೆದಿತ್ತು. ಸುಮಾರು ೫೦೦ರಿಂದ ೬೦೦ ಜನರು ಸೇರಿದ್ದರು. ಚರ್ಚಿನ ಮುಖ್ಯ ಸಭಾಂಗಣ ಜನರಿಂದ ಕಿಕ್ಕಿರಿದಿತ್ತು. ಸುಮಾರು ಇನ್ನೂರು ಜನರು ಗ್ಯಾಲರಿಯಲ್ಲಿ ಕುಳಿತಿದ್ದರು.

''ಎಲ್ಲ ಧರ್ಮಗಳೂ ಒಂದು ಪ್ರಮುಖ ಪ್ರಶ್ನೆಯನ್ನು ಉತ್ತರಿಸಲೆಂದೇ ಇರುವ ಬಹುಮುಖೀ ಪ್ರಯತ್ನಗಳು. ಅದೆಂದರೆ, 'ನಾನು ಯಾರು?' ಎನ್ನುವುದು. ಈ ಪ್ರಶ್ನೆಯು 'ಎಲ್ಲಿಂದ ನಾನು ಬಂದಿದ್ದೇನೆ?', 'ಎಲ್ಲಿಗೆ ಹೋಗುತ್ತಿದ್ದೇನೆ?' ಎಂಬ ಇನ್ನಿತರ ಪ್ರಶ್ನೆಗಳನ್ನು ಮತ್ತೆ ಮತ್ತೆ ಮರುಕಳಿಸುತ್ತದೆ. ಭಾಷಣಕಾರರ ಪ್ರಕಾರ, ಹಿಂದೂಧರ್ಮದ ಮೂಲತತ್ತ್ವ 'ನಾವೆಲ್ಲರೂ ದಿವ್ಯಾನುಸಂಭೂತರು' ಎನ್ನುವುದು. ಇದು ಅಂದು ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ತಿರುಳಾಗಿತ್ತು.''

*(ಮುಂದುವರಿಯುವುದು)*





# ನುಡಿಗುಚ್ಛಗಳ ಸಂಗ್ರಹ 'ಸುವಿಚಾರ ಸುಧೆ'

ನಿವೃತ್ತ ಪಾಚಾರ್ಯರಾದ ಡಾ. ವ್ಹಿ.ಎ.ಬೆನಕಹಾಳ ಅವರು ತಮ್ಮ ವೃತ್ತಿ ಬದುಕಿನ ೪-೫ ದಶಕಗಳ ಅವಧಿಯಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರಸ್ತಾಪಿಸಿದ ವಿಚಾರಗಳನ್ನು ಬಾನುಲಿ ಕೇಂದ್ರದಲ್ಲಿ ನುಡಿಗುಚ್ಛಗಳಾಗಿ ಬಿತ್ತರಿಸಿ, ಅವುಗಳನ್ನು ಬಹುರೂಪಕ್ಕಿಳಿಸಿ ಪ್ರಕಟಿಸಿದ್ದಾರೆ- ಕೃತಿಯ ಹೆಸರು **'ಸುವಿಚಾರ ಸುಧೆ'**. ಇದರ ಶೀರ್ಷಿಕೆಯೇ ಸೂಚಿಸುವಂತೆ, ಬಾಳಿನಲ್ಲಿ ಕಂಡು ಅನುಭವಿಸಿದ, ಕೇಳಿ ತಿಳಿದು ಚಿಂತನೆಯ ಕುಲುಮೆಯಲ್ಲಿ ಎರಕಹೊಯ್ದ ವಿಚಾರಧಾರೆಗಳ ಸಂಗ್ರಹ ಇದಾಗಿದೆ. ಹೆಚ್ಚು ದೀರ್ಘವಲ್ಲದ, ಹೆಚ್ಚೆಂದರೆ ಎರಡು ಪುಟಗಳಷ್ಟಿರುವ ೫೨ ಚಿಂತನೆಗಳು ಇಲ್ಲಿವೆ. ಸುಲಭವಾಗಿ ಓದಿ ಮುಗಿಸಬಹುದಾದ, ಯಾವ ಪುಟದಿಂದ ಬೇಕಾದರೂ ಓದಬಹುದಾದ ರೀತಿಯಲ್ಲಿ ಸ್ವತಂತ್ರವಾದ ರಚನೆಗಳಿವು.

ಇಲ್ಲಿನ ವಿಚಾರಗಳಲ್ಲಿ ವಿಷಯವೈವಿಧ್ಯವಿದೆ. ಶಿಕ್ಷಣ, ವೃತ್ತಿಪರತೆ, ಸಂಸ್ಕೃತಿ, ನೈತಿಕ ಬದುಕು, ರಾಷ್ಟ್ರನಾಯಕರು, ಸಮಯಪ್ರಜ್ಞೆ, ಏಕಾಗ್ರತೆ - ಹೀಗೆ ಹತ್ತು ಹಲವು ವಿಷಯಗಳ ಬಗ್ಗೆ ಲೇಖಕರ ಚಿಂತನೆ ಇಲ್ಲಿ ಮೂಡಿ ಬಂದಿದೆ. ಹೆಚ್ಚಿನ ಬರಹಗಳಲ್ಲಿ ಒಂದೊಂದು ಘಟನೆ ಅಥವಾ ಕಥೆಯಿರುತ್ತದೆ. ತಮ್ಮ ಚಿಂತನೆಯನ್ನು ಈ ಘಟನೆ-ಕಥೆ-ದೃಷ್ಟಾಂತಗಳ ಮೂಲಕ ಲೇಖಕರು ವಿವರಿಸುವುದರಿಂದ ಓದುಗರಿಗೆ ಹೇಳಬೇಕಿದ್ದ ಪ್ರಧಾನ ವಿಷಯ ಚೆನ್ನಾಗಿ ಮನದಟ್ಟಾಗುತ್ತದೆ.

ದೀರ್ಘಕಾಲ ಬೋಧನೆ, ಚಿಂತನೆ ಹಾಗೂ ಮಾರ್ಗದರ್ಶನಗಳಲ್ಲಿ ತೊಡಗಿ ಪಕ್ವಗೊಂಡ ಹಿರಿಯ ಮನಸ್ಸು ಮುಂದಿನ ತಲೆಮಾರಿಗೆ ದಾಟಿಸಬಹುದಾದ ಸಂಪತ್ತೆಂದರೆ ಅನುಭವದಿಂದ ಮೂಡಿಬಂದ ನೈತಿಕ ಮೌಲ್ಯಗಳು. ಹೊಸ ಪೀಳಿಗೆಯ ಜನಾಂಗವು ಹಿರಿಯ ತಲೆಮಾರಿನ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಕಲಿತು, ಮುಂದಕ್ಕೆ ಹೊಸ ಸಮಾಜವನ್ನು ಕಟ್ಟಿಕೊಳ್ಳುವುದು ಅತ್ಯಂತ ಮುಖ್ಯವಾದ ಸಾಮಾಜಿಕ ಪ್ರಕ್ರಿಯೆ. ಸುಸಂಸ್ಕೃತ ಸಮಾಜದಲ್ಲಿ ಈ ಪ್ರಕ್ರಿಯೆ ಸಹಜವಾಗಿ ನಡೆಯುವುದು. ಇಂಥ ಸಾಮಾಜಿಕ, ಸಾಂಸ್ಕೃತಿಕ ಮುನ್ನಡೆಗೆ ನೆರವಾಗಬಲ್ಲ ಹತ್ತುಹಲವು ಅಂಶಗಳಲ್ಲಿ 'ಸುವಿಚಾರ ಸುಧೆ'ಯಂತಹ ಚಿಂತನೆಗಳ ಗುಚ್ಛವೂ ತನ್ನ ಪಾತ್ರವಹಿಸುತ್ತದೆ. ಯುವಪೀಳಿಗೆ ಇಂತಹ ಕೃತಿಗಳಿಂದ ಸಾಕಷ್ಟು ಪ್ರೇರಣೆ ಪಡೆಯಬಹುದಾಗಿದೆ.




**ಕೃತಿ:** ಸುವಿಚಾರ ಸುಧೆ

**ಲೇಖಕರು :** ಡಾ. ವ್ಹಿ.ಎ. ಬೆನಕನಾಳ

**ಪ್ರಕಾಶನ :** ಶ್ರೀಶೈಲ ಪ್ರಕಾಶನ ''ಓದು ಮನೆ'', ವಾರ್ಡ್ ಸಂಖ್ಯೆ 6, ಗುಳೇದಗುಡ್ಡ-587203, ಜಿ. ಬಾಗಲಕೋಟ

**ಪುಟ:** 120 **ಬೆಲೆ :** 80